# ಜಿಲ್ಲಾ ಪಂಚಾಯಿತಿ, ಚಿಕ್ಕಮಗಳೂರು.
## (ಅಭಿವೃದ್ಧಿ ಶಾಖೆ)

ದೂರವಾಣಿ ಸಂಖ್ಯೆ: 08262-220211, ಫ್ಯಾಕ್ಸ್ 08262-220094 E-Mail - development.zp.ckm@gmail.com


31874.ZP-CKM-12016/117/2023-DEVELOPMENT-CHIKKMAGALURU ZP ದಿ.30.12.2023

## -:ಅಧಿಸೂಚನೆ:-

ಇ-ಪಂಚಾಯತ್ ಯೋಜನೆಯಡಿ, ಕಾರ್ಯನಿರ್ವಹಿಸುವ, ಸಹಾಯಕ ಜಿಲ್ಲಾ ಯೋಜನಾ ವ್ಯವಸ್ಥಾಪಕ (ADPM) ಹುದ್ದೆಯು. ಚಿಕ್ಕಮಗಳೂರು ಜಿಲ್ಲಾ ಪಂಚಾಯಿತಿಯಲ್ಲಿ ಖಾಲಿ ಇದ್ದು, ಸದರಿ ಹುದ್ದೆಗೆ, ನೇಮಕಾತಿ ಮಾಡಿಕೊಳ್ಳಲು ಆನ್ ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಿದೆ.

## -:ಹುದ್ದೆಯ ವಿವರ:-

| ಕ್ರ.ಸಂ | ಹುದ್ದೆಯ ಹೆಸರು | ಹುದ್ದೆಗಳ ಸಂಖ್ಯೆ | ವಿದ್ಯಾರ್ಹತೆ | ಜಾತಿ (ನಮೂದಿಸುವುದು) | ವಯೋಮಿತಿ | ಮಾಸಿಕ ಸಂಭಾವನೆ |
|---|---|---|---|---|---|---|
| 01 | ಸಹಾಯಕ ಜಿಲ್ಲಾ ಯೋಜನಾ ವ್ಯವಸ್ಥಾಪಕ. (ADPM) | 01 | BE(C.S/E & C/I.S)/ MCA/BCA, MS Word typing, MS Excel Basic online questions | SC<br>ST<br>Others | ಅರ್ಜಿ ಸಲ್ಲಿಸುವ ಕೊನೆಯ ದಿನಾಂಕಕ್ಕೆ ಗರಿಷ್ಠ 45 ವರ್ಷಗಳು ಮೀರಿರಬಾರದು. | 25,000 |

ಸೂಚನೆಗಳು:

1. ಅರ್ಜಿ ಸಲ್ಲಿಸಲು ಪ್ರಾರಂಭದ ದಿನಾಂಕ: 01/01/2024 ಮತ್ತು ಕೊನೆಯ ದಿನಾಂಕ: 15/01/2024
2. ಅರ್ಜಿಗಳನ್ನು: https://chikkamagaluru.nic.in ವೆಬ್ ಸೈಟ್ ನ ಮುಖಾಂತರ ಅರ್ಜಿ ಸಲ್ಲಿಸುವುದು.

ಆಯ್ಕೆ ವಿಧಾನ

1. ನಿಗಧಿಪಡಿಸಿದ ಹುದ್ದೆಗೆ ಅನುಗುಣವಾಗಿ ವಿಧ್ಯಾರ್ಹತೆ ಹೊಂದಿರಬೇಕು.
2. ನೇಮಕಾತಿ ಅವಧಿಯು 11 ತಿಂಗಳಾಗಿದ್ದು, ಕಾರ್ಯಕ್ಷಮತೆ ಪರಿಶೀಲಿಸಿ ಮುಂದುವರೆಸುವ ಬಗ್ಗೆ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ತೀರ್ಮಾನ ಕೈಗೊಳ್ಳುವುದು.
3. ದಾಖಲಾತಿ ಪರಿಶೀಲನೆ ನಂತರ ಅರ್ಹ ಅಭ್ಯರ್ಥಿಗಳನ್ನು ಮೆರಿಟ್ ಆಧಾರದ ಮೇಲೆ ಆಯ್ಕೆ ಮಾಡಲು ನಿಗಧಿಪಡಿಸಿದ ವಿದ್ಯಾರ್ಹತೆ ಮತ್ತು ಅನುಭವವನ್ನು ಪರಿಗಣಿಸಿ ಈ ಕೆಳಕಂಡ ಮಾನದಂಡಗಳಲ್ಲಿ ಮೆರಿಟ್ ಪಟ್ಟಿ ತಯಾರಿಸುವುದು.

ಮಾನದಂಡಗಳು:-

1. ನಿಗಧಿಪಡಿಸಿದ ವಿದ್ಯಾರ್ಹತೆಗೆ 60% ಅಂಕಗಳು. (ಉದಾ: ನಿಗಧಿಪಡಿಸಿದ ವಿದ್ಯಾರ್ಹತೆಯಲ್ಲಿ 50 ಅಂಕಗಳನ್ನು ಪಡೆದಿದ್ದರೆ, ಆ ಪೈಕಿ ಶೇ.30 ಅಂಕಗಳನ್ನು ಪರಿಗಣಿಸಲಾಗುತ್ತದೆ. ಅದರಂತೆ. 50*60/100=30 ಅಂಕಗಳು).
2. ಕಂಪ್ಯೂಟರ್ ಜ್ಞಾನ ಮತ್ತು ಟೈಪಿಂಗ್ ಗೆ 20% ಅಂಕಗಳು (ಉದಾ: MS word typing, MS Excel Basic online questions ಪರೀಕ್ಷೆಯಲ್ಲಿ 30 ಅಂಕಗಳನ್ನು ಪಡೆದಿದ್ದರೆ 30*20/100=06 ಅಂಕಗಳನ್ನು ನೀಡುವುದು).
3. ಸಂಬಂಧಿಸಿದ ಕ್ಷೇತ್ರದಲ್ಲಿ ಕನಿಷ್ಠ ಒಂದು ವರ್ಷ ಕಾರ್ಯಾನುಭವಕ್ಕೆ 20% ಅಂಕಗಳು. (ಉದಾ: 10 ತಿಂಗಳ ಕಾರ್ಯಾನುಭವವನ್ನು ಪಡೆದಿದ್ದಲ್ಲಿ 10*20/100=2 ಅಂಕಗಳನ್ನು ನೀಡುವುದು.)
4. **ಒಟ್ಟು ಅಂಕಗಳು=100.**

ಅಭ್ಯರ್ಥಿಗಳು ಹುದ್ದೆಗೆ ನಿಗಧಿಪಡಿಸಿದ ವಿದ್ಯಾರ್ಹತೆಗೆ ಪದವಿ/ಸ್ನಾತಕ್ಕೋತ್ತರ ಪದವಿ ಮತ್ತು ಕಾರ್ಯಾನುಭವಕ್ಕೆ ಸಂಬಂಧಿಸಿದಂತೆ ನಮೂದಿಸುವ ವಿವರದ ಆಧಾರದ ಮೇಲೆ ಮೆರಿಟ್ ಪಟ್ಟಿ ತಯಾರಿಸಿ ಅಭ್ಯರ್ಥಿಗಳನ್ನು ಮೂಲ ದಾಖಲಾತಿ ಪರಿಶೀಲನೆಗೆ ಆಹ್ವಾನಿಸಲಾಗುವುದು. ಸದರಿ ಮಾಹಿತಿಯನ್ನು https://chikkamagaluru.nic.in ನಲ್ಲಿ upload ಮಾಡಲಾಗುವುದು.

5. ಒಂದು ವೇಳೆ ಮೆರಿಟ್ ಆಧಾರದ ಮೇಲೆ ಆಯ್ಕೆಯಾದ ಅಭ್ಯರ್ಥಿ ಕರ್ತವ್ಯಕ್ಕೆ ಹಾಜರಾಗದಿದ್ದಲ್ಲಿ ಅಂತಹ ಅಭ್ಯರ್ಥಿಯ ಆಯ್ಕೆಯನ್ನು ರದ್ದುಗೊಳಿಸುವುದು ಮತ್ತು ಮೆರಿಟ್ ಆಧಾರದ ಪ್ರತೀಕ್ಷಾ ಪಟ್ಟಿಯಲ್ಲಿರುವ (Waiting List) ಅಭ್ಯರ್ಥಿಗಳನ್ನು ಆಯ್ಕೆಗೆ ಪರಿಗಣಿಸುವುದು.

ಅಭ್ಯರ್ಥಿಗಳು, ಅರ್ಜಿ ಸಲ್ಲಿಸುವ ಹುದ್ದೆಗೆ ಸಂಬಂಧಿಸಿದಂತೆ, ಸರ್ಕಾರವು ನಿಗಧಿಪಡಿಸಿದ ವಿದ್ಯಾರ್ಹತೆಯನ್ನು, ಕಂಪ್ಯೂಟರ್ ಜ್ಞಾನ ಮತ್ತು ಕೌಶಲ್ಯವನ್ನು ಕಡ್ಡಾಯವಾಗಿ ಹೊಂದಿರಬೇಕು. ಅಭ್ಯರ್ಥಿಯ ಆಯ್ಕೆಯನ್ನು ಪರಿಗಣಿಸುವ ಮತ್ತು ತೆಗೆದುಹಾಕುವ ಅಧಿಕಾರವನ್ನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿಯವರು ಹೊಂದಿರುತ್ತಾರೆ.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ
ಜಿಲ್ಲಾ ಪಂಚಾಯಿತಿ, ಚಿಕ್ಕಮಗಳೂರು.